
# ಸಿಯನ್ನಾದ ಕ್ಯಾತರೀನ್

❑ ಪ್ರವ್ರಾಜಿಕಾ ಆದಿತ್ಯಪ್ರಾಣಾ

**ಧರ್ಮವು ಸಮಾಜವನ್ನು ಎತ್ತಿಹಿಡಿಯುವುದಾದರೆ (*ಧಾರಣಾತ್ ಧರ್ಮ ಇತ್ಯುಚ್ಯತೇ*) ಧರ್ಮವನ್ನೇ ಎತ್ತಿ ಹಿಡಿಯುವವರು ಸಂತರು. ಅಂತಹ ಸಂತರೊಬ್ಬರ ಜೀವನ ಪರಿಚಯ ನೀಡಿರುವ ಪ್ರವ್ರಾಜಿಕಾ ಆದಿತ್ಯಪ್ರಾಣಾ ಅವರು ಕೇರಳದ ತ್ರಿಶೂರಿನ ಶ್ರೀಶಾರದಾಮಠದಲ್ಲಿ ಸೇವೆ ಸಲ್ಲಿಸುತ್ತಿರುವರು.**

ಸ್ವಲ್ಪ ದೂರ ಹೋದನಂತರವೇ ಅಕ್ಕ ತನ್ನ ಜೊತೆ ಇಲ್ಲವೆಂದು ಅರಿತದ್ದು. ಅವನು ತಿರುಗಿ ನೋಡಿದ, ಅಕ್ಕ ದೂರದಲ್ಲಿ ಆ ಚರ್ಚಿನ ಗೋಪುರವನ್ನೇ ದಿಟ್ಟಿಸಿ ನೋಡಿಕೊಂಡು ನಿಂತಿದ್ದಳು. ಅವನು ಸಹ ನೋಡಿದ. ಆದರೆ ಅಲ್ಲಿ ವಿಶೇಷತೆಯೊಂದೂ ಕಾಣುತ್ತಿಲ್ಲವಲ್ಲ! ಆದರೂ ಅಕ್ಕನ ಮುಖದಲ್ಲಿ ತುಂಬಿ ತುಳುಕುವ ಸಂತೋಷವನ್ನು ನೋಡಿದರೆ ಅದ್ಭುತವೂ ಮನೋಹರವೂ ಆದ ದೃಶ್ಯವನ್ನು ನೋಡುತ್ತಿರುವಂತಿದೆ. ಅವನಿಗೆ ಭಯವಾಗಿ ಸ್ವಲ್ಪ ಜೋರಾಗಿ ಕರೆದ : "ಅಕ್ಕಾ, ಅಕ್ಕಾ, ಬಾ." ಅಲುಗಲೇ ಇಲ್ಲ. ಹತ್ತಿರ ಓಡಿ ಹೋಗಿ, "ಅಕ್ಕಾ, ಬೇಗ ಬಾ. ಅಮ್ಮ ಕೋಪಿಸಿಕೊಳ್ಳುವಳು" ಎಂದು ಕೈಹಿಡಿದು ಎಳೆದ. ತಟ್ಟನೆ ಬೆದರಿದ ಅವಳ ಕಣ್ಣುಗಳಲ್ಲಿ ವಿಷಾದದ ಛಾಯೆ ಕಂಡಿತು. ಆದರೆ ಏನೂ ಸಂಭವಿಸಲಿಲ್ಲವೇನೊ ಎಂಬಂತೆ ತಮ್ಮನ ಜೊತೆ ನಡೆದಳು. ಅನುಜನು ಇದನ್ನು ಕುರಿತು ಒಂದು ಸಲವೂ ಚಿಂತಿಸಲಿಲ್ಲ. ಆದರೆ ಕ್ಯಾತರೀನ್‌ಳ ಜೀವನದಲ್ಲಿ ಹೊಸ ಅಧ್ಯಾಯವೊಂದು ಪ್ರಾರಂಭವಾಯಿತು.

❖ ❖ ❖



ಸಿಯನ್ನಾದ ಕ್ಯಾತರೀನ್, ಸಿಯನ್ನಾದ ಸಂತ ಡಾಮಿನಿಕ್ ಚರ್ಚಿನಲ್ಲಿರುವ ಒಂದು ಹಸಿ ಚಿತ್ರ (Fresco) , ಕಲಾಕಾರ ಆಂಡ್ರಿಯಾ ವೆನ್ನಿ

ರೋಮ್‌ನಿಂದ ಕಾಲುನಡಿಗೆಯಲ್ಲಿ ಸುಮಾರು ಒಂದೂವರೆ ದಿನಗಳ ಪ್ರಯಾಣದ ದೂರದಲ್ಲಿ ಮೂರು ಬೆಟ್ಟಗಳು ಕೂಡಿ ಸೇರುವ ಬುಡದಲ್ಲಿ ನಯನಮನೋಹರವಾದ ಸಿಯಾನಾ ಎಂಬ ಪುರಾತನ ನಗರವಿದೆ. ಪ್ರಕೃತಿಸೌಂದರ್ಯವೂ ಶಾಂತಿಯೂ ತುಂಬಿ ತುಳುಕಾಡುವ ಪುಟ್ಟ ನಗರದಲ್ಲಿ ೧೩೪೭, ಮಾರ್ಚ್ ೨೫ರಂದು ಕ್ಯಾತರೀನ್ ಜನ್ಮತಾಳಿದ್ದು. ಗಿಯಾಕೋಮೊ ಬೆನಿನ್‌ಕಾಸಾ ಮತ್ತು ಪತ್ನಿಯಾದ ಮೊನಾ ಲಾಪಾರವರಿಗೆ ೨೫ ಸಂತಾನಗಳಿದ್ದವು; ಅದರಲ್ಲಿ ೨೪ನೆಯವರಾಗಿ ಜನಿಸಿದ ಅವಳಿಮಕ್ಕಳಲ್ಲಿ ಒಬ್ಬಳಾಗಿದ್ದಳು ಕ್ಯಾತರೀನ್.

ನೋಡಿದೊಡನೆ ಎಲ್ಲರ ಮನಸ್ಸನ್ನು ಆಕರ್ಷಿಸುವ ಭಾವವಿತ್ತು ಆ ಬಾಲಿಕೆಗೆ. ಕ್ಯಾತರೀನ್ ಆರು ವರ್ಷ ವಯಸ್ಸಾದಾಗ ಒಂದು ದಿನ ತಾಯಿ ಲಾಪ ಅವಳನ್ನು ಮತ್ತು ಅವಳ ಅನುಜ ಸ್ಟಿಫಾನೋವ್‌ನನ್ನು ನಗರದ ಕೊನೆಯಲ್ಲಿ ವಾಸಿಸುತ್ತಿದ್ದ ದೊಡ್ಡ ಮಗಳ ಮನೆಗೆ ಕಳುಹಿಸಿದ್ದಳು. ಮಕ್ಕಳಿಬ್ಬರೂ ಹಿಂದಿರುಗಿ ಬರುವ ದಾರಿಯಲ್ಲಿ ಆದ ಘಟನೆಯನ್ನೇ ಈ ಮೊದಲು ಸೂಚಿಸಿದ್ದು. ಆ ಸಂಗತಿಯನ್ನು ಕುರಿತು ಅವಳು ಮುಂದೆ ಕುಟುಂಬ ಪುರೋಹಿತರಾದ ಫಾದರ್ ರೈಮಂಡ್‌ರೊಡನೆ ಈ ಪ್ರಕಾರ ವಿವರಿಸಿದ್ದಳು: "ನಾನು ಬರುವ ದಾರಿಯಲ್ಲಿರುವ ಆ ಡಾಮಿನಿಕನ್ ಚರ್ಚಿನ ಮುಂದೆ ಬಂದಾಗ ನನಗೆ ತಟ್ಟನೆ ಮೇಲೆ ನೋಡಬೇಕೆಂದು ತೋರಿತು. ನಾನು ಆಗ ಗೋಪುರದ ಮೇಲೆ ಕಂಡ ದೃಶ್ಯ! ಓಹ್! ಸಿಂಹಾಸನದಲ್ಲಿ ಸಾಕ್ಷಾತ್ ಏಸು ಪೋಪ್‌ನ ವೇಷದಲ್ಲಿ! ತಲೆಯಲ್ಲಿ ಕಿರೀಟ, ಜೊತೆಯಲ್ಲಿ ದೈವಪುತ್ರನ ಮೂರು

ಸುತಾನಗಳು—ಪೀಟರ್, ಪಾಲ್ ಮತ್ತು ಸೇಂಟ್ ಜಾನ್. ನಂತರ ಬಲಗೈ ಎತ್ತಿ ಏಸುದೇವನು ಆಕಾಶದಲ್ಲಿ ಮೂರು ಕ್ರಾಸ್ ಬರೆದು ತೋರಿಸಿದ. ದೇವಪುತ್ರನು ನೇರವಾಗಿ ನನ್ನನ್ನು ಅನುಗ್ರಹಿಸಿದ. ಮಂತ್ರಮುಗ್ಧೆಯಂತೆ ಸರ್ವವನ್ನೂ ಮರೆತು ಭಾವಸಮಾಧಿಯಲ್ಲಿ ಒಂದಾದೆ. ತಟ್ಟನೆ ಅನುಜನ ಕೂಗು ಬಾಹ್ಯಲೋಕಕ್ಕೆ ಎಳೆದು ತಂದಿತು ಹಾಗೂ ಅದರೊಡನೆ ಆ ಸುಂದರ ದೃಶ್ಯವೂ ಅದೃಶ್ಯ ವಾಯಿತು." ಪುರೋಹಿತರು ಕಥೆಯನ್ನು ಕೇಳಿ ಆಶ್ಚರ್ಯ ಚಕಿತರಾದರು.

ಕ್ಯಾತರೀನ್‌ಳ ಜೀವನದಲ್ಲಿ ಅವಳಿಗರಿವಿಲ್ಲದೆಯೇ ಕೆಲವು ಬದಲಾವಣೆಗಳು ಉಂಟಾಗತೊಡಗಿದವು. ಈಶ್ವರಪ್ರೇಮದಲ್ಲಿ ಮನಸ್ಸು ನಿಂತ ಅವಳಿಗೆ ೬-೭ ವಯಸ್ಸಿನಲ್ಲೇ ಒಳ್ಳೆಯ ಪಕ್ವತೆ ಮೂಡಿತು. ತನ್ನನ್ನು ದೈವಪಾದಕ್ಕೆ ಅರ್ಪಿಸಿಕೊಳ್ಳಲು ತೀರ್ಮಾನಿಸಿ ಒಂದು ದಿನ ಪ್ರಾರ್ಥನಾ ಸಮಯದಲ್ಲಿ ಹೀಗೆಂದು ಪ್ರತಿಜ್ಞೆ ಮಾಡಿದಳು: "ಈಶ್ವರ, ನಾನಿದೋ ನಿನ್ನೊಡನೆಯೂ ನಿನ್ನ ಪುತ್ರ ನೊಡನೆಯೂ ಪ್ರತಿಜ್ಞೆ ಮಾಡುತ್ತಿದ್ದೇನೆ—ಈ ಜೀವನದಲ್ಲಿ ಯಾರನ್ನೂ ಪತಿಯಾಗಿ ಸ್ವೀಕರಿಸೆನು. ಪರಿಶುದ್ಧ, ನಿಷ್ಕಳಂಕ ಜೀವನ ನಡೆಸು ವೆನು." ಈ ನಿಶ್ಚಯದೊಡನೆ ಅವಳು ದೇವರಿಗೆ ಸೇರಿದವಳಾದಳು. ಸಂತ ಡಾಮಿನಿಕ್ ಸಂಪ್ರದಾಯದ ತಪಶ್ಚರ್ಯೆ ಮತ್ತು ಜೀವಿತಕ್ರಮ ಅವಳಿಗೆ ಇಷ್ಟವಾದವು. ತನ್ನ ಜೀವಿತಚರ್ಯೆಯೂ ಅದೇ ರೀತಿ ಆಗಲೆಂದು ನಿಶ್ಚಯಿಸಿದಳು. ದಿನದಲ್ಲಿ ಅಧಿಕ ಭಾಗ ಆ ದೊಡ್ಡ ಮನೆಯ ಒಂದು ಮೂಲೆಯಲ್ಲಿ ಆ ಪುಟ್ಟ ತಪಸ್ವಿನಿ ಧ್ಯಾನನಿರತ ಳಾಗಿರುವುದನ್ನು ಮನೆಯವರೆಲ್ಲಾ ಕಂಡರು. ಈ ನಡುವೆ ಆಹಾರ ಸ್ವೀಕರಿಸುವಾಗ ಮಾಂಸವನ್ನು ಉಪೇಕ್ಷಿಸಿದಳು. ರೊಟ್ಟಿ ಮತ್ತು ತರಕಾರಿಗಳನ್ನು ಮಾತ್ರವೇ ತಿನ್ನುತ್ತಿದ್ದಳು.

ಕಾಲಚಕ್ರ ತಿರುಗಿತು. ಕ್ಯಾತರೀನ್‌ಗೆ ವಯಸ್ಸು ಹನ್ನೆರಡಾ ಯಿತು. ಇಟಲಿಯಲ್ಲಿ ಅಂದಿನ ಸಮಾಜ ಪದ್ಧತಿಯಂತೆ ಅದು ವಿವಾಹಪ್ರಾಯ. ಆದರೆ ಕ್ಯಾತರೀನ್ ಮಾತ್ರ ಎಲ್ಲ ಯುವತಿ ಯರಂತೆ ಆಕರ್ಷಕ ವಸ್ತ್ರ, ಆಭರಣಗಳನ್ನು ತೊಡುವ ಬದಲು ತನ್ನ ವ್ರತ, ಪ್ರಾರ್ಥನೆ, ಸಾಧನೆಗಳನ್ನು ಮತ್ತಷ್ಟು ತೀವ್ರಗೊಳಿಸಿ ದಳು. ತಾಯಿ ಅವಳಲ್ಲಿ ಉಂಟಾಗುತ್ತಿದ್ದ ಒಂದೊಂದು ಬದ ಲಾವಣೆಯನ್ನೂ ಗಮನಿಸುತ್ತಿದ್ದಳು. ವಿವಾಹಕ್ಕೆ ಸಮ್ಮತಿಸದ ಅವಳ ನಿಶ್ಚಯದ ಎದುರು ಮನೆಯವರೆಲ್ಲರ ಪ್ರಯತ್ನ ಸೋತಿತು. ತಾಯಿ ಡಾಮಿನಿಕನ್ ಪಾದ್ರಿಯನ್ನು ಕರೆಸಿದಳು. ತಾನು ಸ್ವಯಂ ದೈವಪಾದದಲ್ಲಿ ಅರ್ಪಿಸಿಕೊಂಡಾಯಿತು, ಇನ್ನು ತನ್ನದೆಂದು ಹೇಳಿ ಕೊಳ್ಳಲು ತನ್ನ ಕೈಲಿ ಯಾವುದೂ ಬಾಕಿ ಇಲ್ಲವೆಂದು ಕ್ಯಾತರೀನ್ ಪಾದ್ರಿಗೆ ತಿಳಿಸಿದಳು. ಅವಳ ದೃಢನಿಶ್ಚಯ, ಪರಿಶುದ್ಧತೆ, ಮನಶ್ಶಕ್ತಿ ಯನ್ನು ಕಂಡು ವಿಸ್ಮಯಭರಿತನಾಗಿ ಈಶ್ವರನ ಯಾವುದೋ ಗೂಢ ಉದ್ದೇಶವನ್ನು ಸಾಧಿಸಲು ಜನ್ಮತಾಳಿದ ಮಹಾಯೋಗೇಶ್ವರಿ ಎಂದು ಪಾದ್ರಿ ಅರಿತರು. ಆದರೂ ಒಮ್ಮೆ ಪರೀಕ್ಷಿಸಿ ನೋಡಲು ಹೀಗೆ ಹೇಳಿದರು : "ಸರಿ, ನಿನ್ನ ಉದ್ದೇಶವು ಯಥಾರ್ಥವೊ ಅಲ್ಲವೊ ಎಂಬುದನ್ನು ತಿಳಿಯಬೇಕು. ಶಾರೀರಿಕ ಸೌಂದರ್ಯವನ್ನು ವರ್ಧಿಸಲು ಮಾತ್ರ ಸಹಾಯ ಮಾಡುವ ನಿನ್ನ ಈ ಕೇಶವನ್ನು ಕತ್ತರಿಸಿ ಹಾಕಲು ಧೈರ್ಯವಿದೆಯೇ?" ಆ ಸವಾಲನ್ನು ಸ್ವೀಕರಿಸಿದ ಆಕೆ ಯಾರಿಗೂ ತಿಳಿಯದಂತೆ ತನ್ನ ಉದ್ದ, ಗುಂಗುರು, ಸ್ವರ್ಣ ವರ್ಣದ ಕೇಶರಾಶಿಯನ್ನು ನಿಷ್ಕರುಣೆಯಿಂದ ಕತ್ತರಿಸಿ ಹಾಕಿದಳು! ಮನೆಯಲ್ಲಿ ಕೋಲಾಹಲವಾಗಬಾರದೆಂದು ತಲೆಯನ್ನು ಬಟ್ಟೆ ಯಿಂದ ಮುಚ್ಚಿಕೊಂಡಳು. ಒಮ್ಮೆ ತಾಯಿ ಲಾಪಾ ಬಟ್ಟೆಯನ್ನು ತೆಗೆದು ನೋಡಿದಾಗ ಮನೆಯೇ ಬಿದ್ದಂತಾಗಿ ಆಘಾತವಾಯಿತು. ಮನೆಯವರೆಲ್ಲಾ ಸೇರಿ ಆಕೆಗೆ ಕಿರುಕುಳ ನೀಡಲಾರಂಭಿಸಿದರು. ಬಾಹ್ಯ ಬಿರುಗಾಳಿಯ ಮಧ್ಯೆ ಹೃದಯಾಂತರಾಳದಲ್ಲಿ ಅವರ್ಣ ನೀಯವಾದ ಒಂದು ಆನಂದಾನುಭೂತಿ ಸರ್ವದಾ ಅವಳಿಗೆ ಉಂಟಾಗುತ್ತಿತ್ತು.

ಒಮ್ಮೆ ಧ್ಯಾನನಿರತಳಾದ ಅವಳ ತಲೆಯ ಮೇಲೆ ಬಿಳಿ ಬಣ್ಣದ ಒಂದು ಪಾರಿವಾಳ ತಿರುಗುತ್ತಿರುವುದನ್ನು ಕಂಡ ತಂದೆ ತಾಯಿಗಳು ಮತ್ತು ಮನೆಯವರು ಅವಳ ದಿವ್ಯತೆ ಮತ್ತು ಅಸಾಧಾರಣತ್ವವನ್ನು ಮನಗಂಡು ಅಂದಿನಿಂದ ಸಾಧನೆಗೆ ಸಹಾಯಕರಾದರು. ಆ ಪುಟ್ಟ ಯೋಗಿನಿಯ ತಪಸ್ಸಿನ ಕಠೋರತೆ ಪ್ರತಿದಿನವೂ ವರ್ಧಿಸತೊಡಗಿತು. ಮಲಗಲು ಒಂದು ಹಲಗೆ, ತಲೆದಿಂಬಿನ ಸ್ಥಾನದಲ್ಲಿ ಚಿಕ್ಕದೊಂದು ಹಲಗೆ ಚೂರು. ಆಹಾರವೂ ತುಂಬ ಸರಳ: ರೊಟ್ಟಿ, ನೀರು, ಸ್ವಲ್ಪ ಬೇಯಿಸಿದ ತರಕಾರಿ. ಈ ಮಧ್ಯೆ ಅವಳಿಗಾದ ದರ್ಶನದ ಅನುಸಾರ ತಾನು ಡಾಮಿನಿಕನ್ ಸಂಘಕ್ಕೆ ಸೇರಬೇಕೆಂಬ ಹಂಬಲದ ಹಾದಿಯಲ್ಲಿನ ವಿಘ್ನಗಳಿಂದ ರೋಗಪೀಡಿತಳಾದಳು. ಸಂಕಟವನ್ನು ತಾಳಲಾರದ ತಾಯಿ ತನ್ನ ಮಗಳನ್ನು ಸಂನ್ಯಾಸಿನಿಯಾಗಿ ಸ್ವೀಕರಿಸಬೇಕೆಂದು ಪಾದ್ರಿ ಗಳನ್ನು ಅಂಗಲಾಚಿದಳು. ಲಾಪಾರ ಅಪೇಕ್ಷೆಯಂತೆ ಹುಡುಗಿ ಯನ್ನು ಪರೀಕ್ಷಿಸುವ ಸಲುವಾಗಿ ಮನೆಗೆ ಬಂದರು. ಚಿಕ್ಕ ವಯ ಸ್ಸಾದರೂ ಪ್ರಾಯಕ್ಕೆ ಮೀರಿದ ತಪಶ್ಚರ್ಯೆಯಿಂದ ಪಕ್ವತೆ, ಆಧ್ಯಾತ್ಮಿಕ ಉನ್ನತಿ ಲಭಿಸಿರುವುದನ್ನು ಕಂಡರು. ಸಿಡುಬಿನ ಕಲೆ ಗಳಿಂದ ಸೌಂದರ್ಯವು ಮಾಸಿತ್ತು. ಒಳ್ಳೆಯದೇ ಆಯಿತೆಂದು ಒಪ್ಪಿ ಸ್ವೀಕರಿಸಿದರು ತಮ್ಮ ಸಂಘಕ್ಕೆ. ಲೌಕಿಕ ದೃಷ್ಟಿಯಿಂದ ಅವಿವಾ ಹಿತೆಯಾದ ಸ್ತ್ರೀಗೆ ಇದೇ ಪ್ರಥಮ ಬಾರಿ ಆ ಸಂಘದಿಂದ ಸಂನ್ಯಾಸ ವಸ್ತ್ರ ಕೊಡಲಾಯಿತು. ಆದರೆ ಬಹಳ ಬೇಗನೆ ಅನೇಕ ಯುವತಿ ಯರು ಅವಳ ಅನುಯಾಯಿಗಳಾಗಲು ಸಂಘ ಸೇರಿದರು.

❖ ❖ ❖

ಒಬ್ಬಳು ಸಂನ್ಯಾಸಿನಿ ತೆಗೆದುಕೊಳ್ಳಬೇಕಾದ ಪ್ರತಿಜ್ಞೆಗಳೆಲ್ಲ ವನ್ನೂ ತನ್ನ ನಿತ್ಯಜೀವನದಲ್ಲಿ ನಿರ್ಬಂಧವಾಗಿ ಪಾಲಿಸಿಕೊಂಡು ಹೋಗುತ್ತಿದ್ದಳು. ಮುಂದಿನ ಮೂರು ವರ್ಷಗಳು ನಿರಂತರ ಜಪ, ಧ್ಯಾನ, ಕಠೋರ ಸಾಧನೆಗಳಲ್ಲಿ ಕಳೆದು ಹೋದವು. "ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ" ಎಂಬುದಲ್ಲವೆ ಸ್ನೇಹಮೂರ್ತಿ ಗಳಾದ ಯೋಗೀಶ್ವರರನ್ನು ಲೋಕಸೇವೆಯ ಕಡೆಗೆ ತಿರುಗಿಸಲು ಪ್ರೇರೇಪಿಸುವ ಮಂತ್ರ! ಅಂದರೆ ಬಹುಜನರ ಹಿತಕ್ಕೂ ಬಹು ಜನರ ಸುಖಕ್ಕೂ ಪರಿಶ್ರಮಿಸುವುದರೊಡನೆ ಸೃಷ್ಟಿಕರ್ತನನ್ನು

ಸಾಕ್ಷಾತ್ಕರಿಸಿಕೊಳ್ಳಬೇಕು. ಸಂಸಾರಾಗ್ನಿಯಲ್ಲಿ ಬೇಯುತ್ತಿರುವ ಆತ್ಮಗಳನ್ನು ರಕ್ಷಿಸುವುದು ಡಾಮಿನಿಕನ್ ಸಂಪ್ರದಾಯದಲ್ಲಿ ಒಂದು ಅಂಗವಾಗಿದ್ದು, ಕ್ಯಾತರೀನ್ ಬೆನಿನ್‌ಕಾಸಾಳ ಜೀವನವ್ರತವೂ ಅದೇ ಆಯಿತು. "ಹಸಿದು ಬಂದ ನನಗೆ ಆಹಾರವನ್ನೂ ದಾಹದಿಂದ ಬಂದಾಗ ಪಾನೀಯವನ್ನೂ ಕೊಟ್ಟೆ, ಅಪರಿಚಿತನಾದ ನನಗೆ ನೀನು ಸ್ವಾಗತವನ್ನಿತ್ತೆ, ನಗ್ನನಾದ ನನಗೆ ವಸ್ತ್ರದಾನ ಮಾಡಿದೆ, ರೋಗಿಯಾದ ನನ್ನನ್ನು ಉಪಚರಿಸಿದೆ, ಬಂಧನಕ್ಕೊಳಗಾದ ನನ್ನನ್ನು ನೀನು ಸಮೀಪಿಸಲಿಲ್ಲವೇ? ನಾನಿದೊ ಸತ್ಯವನ್ನು ಹೇಳುವೆ. ಸಣ್ಣವರಲ್ಲಿ ಸಣ್ಣವರಾದ ನನ್ನ ಸಹೋದರರಿಗೆ ನೀನು ಮಾಡಿದ ಸೇವೆಗಳು ನನಗೆ ಮಾತ್ರವೇ ಮಾಡಿದ್ದಾಗಿವೆ"—ಎಂಬುದಲ್ಲವೆ ದೇವವಚನ? (ಬೈಬಲ್, ಮ್ಯಾಥ್ಯೂ ೨೫ : ೩೫-೩೬; ೩೪). ಕ್ಯಾತರೀನ್‌ಳ ಆದರದ ಸೇವಾತತ್ಪರತೆಗೆ ಅಡಿಪಾಯವಾಯಿತು ಈ ತತ್ತ್ವ. ೧೩೭೨-೭೪ರಲ್ಲಿ ಇಟಲಿಯ ಜನರನ್ನು ಪ್ಲೇಗ್‌ರೋಗವು ಬಹಳವಾಗಿ ಪೀಡಿಸಿತು. ಚಿಕ್ಕವರು, ಪ್ರಾಯದವರು, ಸ್ತ್ರೀಪುರುಷರು, ಧನಿಕದರಿದ್ರರು ಸೇರಿದ "ಕ್ಯಾತರೀನ್‌ಳ ಕುಟುಂಬ" ರೋಗಪೀಡಿತರ ಶುಶ್ರೂಷೆಗೆ ಅವಿರತ ಪರಿಶ್ರಮಿಸಿತು.

ಆದರೆ ಲೋಕ ಪರಿಚಯವು ತೀರ ಇಲ್ಲದ ದೈವಪುತ್ರಿಯು ಮಾಡಿ ಮುಗಿಸಬೇಕಾದ ಇದಕ್ಕೂ ಎಷ್ಟೋ ಮಹತ್ತರವಾದ ಒಂದು ಕಾರ್ಯವು ಬಾಕಿಯಿತ್ತು.

ಹದಿನಾಲ್ಕನೆ ಶತಮಾನದ ಉತ್ತರಾರ್ಧ ಯೂರೋಪಿನಲ್ಲಿ ರಾಕ್ಷಸೀಭಾವದ ಕಾಲಘಟ್ಟ. ಅಧಿಕಾರದ ದುರ್ಮೋಹ, ಸುಖಲೋಲುಪತೆ ಮುಂತಾದ ವಿನಾಶ ಶಕ್ತಿಗಳಿಗೊಳಪಟ್ಟ ಚರ್ಚುಗಳು ಅಧಃಪತನ ಹೊಂದಿದ್ದವು. ಅಷ್ಟೂ ಸಾಲದೆ ಪೋಪ್ ಗ್ರಿಗರಿ-೧೧ ಪುಣ್ಯನಗರವಾದ ರೋಮನ್ನು ಬಿಟ್ಟು ಅವಿಗ್ನಾನ್‌ನಲ್ಲಿ ವಿಲಾಸ ಜೀವನ ನಡೆಸುತ್ತಿದ್ದರು. ಅವರೊಡನಿದ್ದ ವಿದೇಶಿಗಳಾದ ಸಭಾಪ್ರಭುಗಳು ಇಟಲಿಯ ಜನರನ್ನು ಬಹಳವಾಗಿ ಪೀಡಿಸುತ್ತಿದ್ದರು. ನಾಡಿನಲ್ಲಿ ಆಹಾರವಿಲ್ಲ, ಪೋಪ್ ಅಧೀನದಲ್ಲಿದ್ದ ಬೇರೆ ಸಂಸ್ಥಾನಗಳಿಂದ ಧಾನ್ಯಗಳು ಬರುವುದೂ ನಿಂತಿತು. ಕ್ಷುಬ್ಧರಾದ ಜನರು ಪೋಪ್ ಅಧಿಕಾರದೆದುರು ದಂಗೆಯೆದ್ದರು. ಫ್ಲಾರೆನ್ಸ್ ನಗರದ ನೇತೃತ್ವದಲ್ಲಿ ಬೇರೆ ಎಲ್ಲ ನಗರಗಳೂ ಅಣಿಯಾಗಿ ನಿಂತವು.

ಇದೆಲ್ಲವನ್ನೂ ಕಂಡ ಕ್ಯಾತರೀನ್‌ಳ ಹೃದಯ ನಡುಗಿತು. ಕ್ಯಾಥೋಲಿಕ್ ಚರ್ಚು ದೈವದ ವಧುವಿದ್ದಂತೆ, ಪೋಪ್ ದೈವದ ಏಕೈಕ ಪ್ರತಿನಿಧಿ. ಫ್ಲಾರೆನ್ಸ್‌ನ ಮೇಲೆ ಶಿಕ್ಷಾಪತ್ರ ಕೊಡಲಾಯಿತು; ಅದು ಒಂದು ತಪ್ಪು ಮಾಡಿದ ನಗರವಾಗಿ ಪ್ರಖ್ಯಾತಿಯಾಯಿತು. ಫ್ಲಾರೆನ್ಸ್‌ನ ಚರ್ಚುಗಳ ಬಾಗಿಲು ಮುಚ್ಚಿದುವು; ಘಂಟೆಗಳು ನಿಶ್ಶಬ್ದವಾದುವು; ಪ್ರಾರ್ಥನೆಗಳು ನಿಂತವು; ಮತಪ್ರಸಂಗವೂ ನಿಂತಿತು. ಆಗಲೇ ದೈವಸನ್ನಿಧಿಯಿಂದ ಸಮಾಧಾನ ಸಂದೇಶವನ್ನು ತೆಗೆದುಕೊಂಡು ಒಂದು ಪುಟ್ಟ ದೇವತೆ ಪ್ರತ್ಯಕ್ಷವಾಗಿದ್ದು.

ಕ್ಯಾತರೀನ್ ಬೆನಿನ್‌ಕಾಸಾ ತನ್ನ ಶಾಂತಿಸಂದೇಶವನ್ನು ಎಲ್ಲೆಡೆಯಲ್ಲೂ ಹರಡಿದಳು. ಆಗಿನ ಕಾಲದಲ್ಲಿ ಇಟಲಿಯ ಹೆಣ್ಣುಮಕ್ಕಳು ಓದುಬರೆಯುವುದು ಜಾರಿಯಲ್ಲಿರಲಿಲ್ಲ. ಆದರೂ ಕ್ಯಾತರೀನ್ ದೈವಪ್ರೇರಣೆಯಿಂದ ಎರಡನ್ನೂ ಕಲಿತಿದ್ದಳು. ಅವಳ ಕೈಲಿಪಿ ಅತಿ ಸುಂದರವಾಗಿತ್ತು. ಚರ್ಚಿನ ಅಧಃಪತನದಿಂದ ನೊಂದ ಕ್ಯಾತರೀನ್ ಪೋಪ್‌ರಿಗೆ ಅನೇಕ ಪತ್ರಗಳನ್ನು ಬರೆದಳು. ಅಜ್ಞತೆಯಲ್ಲಿ ಸಿಲುಕಿದವರಿಗೆ ಮಾರ್ಗದರ್ಶನ ಮಾಡುವುದು ಪೋಪ್‌ರ ಜವಾಬ್ದಾರಿಯೆಂದೂ, ಚರ್ಚಿನ ಅಧಿಕಾರಿಗಳು ಸುಖಲೋಲುಪತೆ, ಸ್ವಾರ್ಥ, ಇಂದ್ರಿಯಲಾಲಸೆಗಳಲ್ಲಿ ಮುಳುಗಿ ಬಡವರನ್ನೂ ಸಾಧಾರಣರನ್ನೂ ಹಿಂಸಿಸಿ ಚರ್ಚಿನ ಅಧಃಪತನಕ್ಕೆ ಕಾರಣರಾಗಿರುವರೆಂದೂ ವಿವರಿಸಿದಳು.

ಇತ್ತ ೧೩೭೬ರಲ್ಲಿ ಫ್ಲಾರೆನ್ಸ್ ಜನರು ತಮ್ಮ ತಪ್ಪನ್ನು ಒಪ್ಪಿಕೊಂಡರು. ಪೋಪ್‌ರೊಡನೆ ಕ್ಷಮೆ ಯಾಚಿಸಲು ಕ್ಯಾತರೀನ್‌ಳನ್ನು ಶಾಂತಿ ಸಂದೇಶಕಳಾಗಿ ಕಳುಹಿಸಿದರು. ಆಧುನಿಕ ಕ್ಯಾಥೋಲಿಕ್ ಸಭೆಗಳಲ್ಲಿಯೇ ಸ್ತ್ರೀಯರಿಗೆ ಪ್ರವೇಶಿಸಲು ಸ್ಥಾನವಿಲ್ಲದಿರುವಾಗ ೭೦೦ ವರ್ಷಗಳ ಹಿಂದೆ ಕೇವಲ ೨೯ ವರ್ಷ ಪ್ರಾಯದ ಈ ಯುವ ಸಂನ್ಯಾಸಿನಿ ದಾರಿತಪ್ಪಿ ಅಲೆಯುವ ಕ್ಯಾಥೋಲಿಕ್ ಲೋಕದ ಏಕಪ್ರತಿನಿಧಿಯಾಗಿ, ಅವರಿಗಾಗಿ ವಾದಿಸಲು, ಕ್ಷಮೆಯಾಚಿಸಲು ಪೋಪ್‌ರ ಮುಂದೆ ನಿಂತಳು!! ಪೋಪ್ ಆದರದಿಂದ ಅವಳನ್ನು ಬರಮಾಡಿಕೊಂಡರು. ಅಷ್ಟೇ ಅಲ್ಲ, ಯಾರು ಹೇಳಿದರೂ ಕೇಳದ ಗ್ರಿಗರಿ-೧೧ ಕ್ಯಾತರೀನ್‌ಳ ದೈವಪ್ರಚೋದಿತ ಪ್ರಾರ್ಥನೆಗಳಿಂದ ರೋಮಿಗೆ ಹಿಂತಿರುಗಿದರು. ಕ್ಯಾತರೀನ್‌ಳ ಕಾರ್ಯ ಮುಗಿಯಿತು.

ತನ್ನ ಈ ಜನ್ಮದ ಸಾಧನೆಗಳು ಕೊನೆಗೊಳ್ಳುವ ಸಮಯವಾಯಿತೆಂದು ಅರಿತ ಆಕೆ ಒಂದು ಚಿಕ್ಕ ಕೊಠಡಿಯಲ್ಲಿ ಕಾಲ ಕಳೆಯುತ್ತಾ "Dialogue" (ಸಂವಾದ) ಎಂಬ ಅಮೂಲ್ಯ ಗ್ರಂಥವೊಂದನ್ನು ರಚಿಸಿದಳು. ದುರ್ಬಲವಾದ ಶರೀರವು ಒಂದಾದ ಮೇಲೆ ಒಂದು ಬಂದ ರೋಗಾಕ್ರಮಣಗಳಿಗೆ ತುತ್ತಾಗಿ ೧೩೮೦ ಏಪ್ರಿಲ್ ೨೯ನೇ ತಾರೀಖು ಏಸುಕ್ರಿಸ್ತನಲ್ಲಿ ಐಕ್ಯವಾದಳು.

ಪೋಪ್ ಎರಡನೆಯ ಪಿಯಾಸ್ ಆಕೆಯನ್ನು ರೋಮಿನ ರಕ್ಷಕ ಸಂತಳು ಎಂದೂ, ಪೋಪ್ ಹನ್ನೆರಡನೆಯ ಪಿಯಾಸ್ ಅವಳನ್ನು ಮೊದಲನೆಯ ರಕ್ಷಕಳೆಂದೂ ಅಸೀಸಿಯಲ್ಲಿ ನಾಮಕರಣ ಮಾಡಿದರು. ಇನ್ನು ಪೋಪ್ ನಾಲ್ಕನೆಯ ಪಾಲ್ ಆಕೆಯನ್ನು ಚರ್ಚಿನ ಡಾಕ್ಟರುಗಳ ಪಟ್ಟಿಯಲ್ಲಿ ಸೇರಿಸಿರುವರು. ಚರ್ಚಿನ ಅತಿ ದೊಡ್ಡ ಥಿಯೋಲಾಜಿಯಲ್ಲಿನ ಕೂಟದಲ್ಲಿ ಸಿಯೆನ್ನಾದ ಕ್ಯಾತರೀನ್ ಹಾಗೂ ಅವಿಲಾದ ತೆರೆಸಾ ಅತಿ ಪ್ರಧಾನವಾದ ಸ್ಥಾನಗಳನ್ನು ಅಲಂಕರಿಸಿರುವರು.

**ಶ್ರೀರಾಮಕೃಷ್ಣರು, ಯಾರು ಬಾಲ್ಯದಲ್ಲೇ ತಮ್ಮನ್ನು ದೇವರಿಗೆ ಸಮರ್ಪಿಸಿಕೊಳ್ಳುವರೋ ಅಂತಹವರನ್ನು ಹಕ್ಕಿ ಮುಟ್ಟದ ಹಣ್ಣುಗಳಿಗೆ ಹೋಲಿಸುತ್ತಿದ್ದರು. ಸಂಸಾರವೆಂದರೇನು ಎಂದು ಅರಿಯುವ ಮುನ್ನವೇ ದೈವಪಾದಕ್ಕೆ ಸಮರ್ಪಿತಳಾದಳು, ಆ ಪುಟ್ಟ ಯೋಗಿನಿ!! [ಆಧಾರ :** *ಪ್ರವ್ರಾಜಿಕಾ ಅಜಯಪ್ರಾಣಾ ಅವರು ಬರೆದ "ದಶಪುಷ್ಪಂ" ಎಂಬ ಮಲಯಾಳಂ ಪುಸ್ತಕ.*]